# ವಿಶ್ವನಂದಿನಿ ಪ್ರಶ್ನೋತ್ತರಮಾಲೆ – 1

**ಗುರುಗಳಿಗೆ ನಮಸ್ಕಾರಗಳು. ಶ್ರೀ ಗಣೇಶದೇವರಿಗೆ ತುಳಸೀ ಎಲೆ ಸಮರ್ಪಿಸಬಾರದು, ನಿಷಿದ್ಧ ಎನ್ನುತ್ತಾರೆ. ಇದು ನಿಜವೇ?**

**ಗೋಪಾಲಕೃಷ್ಣ, ಬೆಂಗಳೂರು.**

ತುಳಸಿಯನ್ನು ಭಗವಂತನಿಗೆ ಬಿಟ್ಟು ಬೇರೆ ಯಾವ ದೇವತೆಗಳಿಗೂ ನೇರವಾಗಿ ಸಮರ್ಪಿಸಬಾರದು. ದೇವರಿಗೆ ಸಮರ್ಪಿಸಿದ ತುಳಸಿಯನ್ನು ಅವಶ್ಯವಾಗಿ ಎಲ್ಲ ದೇವತೆಗಳಿಗೂ, ಗಣಪತಿಗೂ ಸಮರ್ಪಿಸಬೇಕು.

ಅಂದರೆ, ತುಳಸೀ ಗಿಡದಿಂದ ತುಳಸೀದಳಗಳನ್ನು ತಂದು ಪ್ರಾಣದೇವರಿಗೆ, ರುದ್ರದೇವರಿಗೆ, ನವಗ್ರಹಗಳಿಗೆ, ಗಣಪತಿಗೆ, ಒಟ್ಟಾರೆ ಯಾವುದೇ ದೇವತೆಗಳಿಗೂ ಅರ್ಚನೆ ಮಾಡಬಾರದು. ಮೊದಲಿಗೆ ಶ್ರೀಹರಿಗೆ ಅರ್ಚನೆಯನ್ನು ಮಾಡಬೇಕು. ದೇವರ ಪೂಜೆಯ ನಂತರ ಶ್ರೀಹರಿಗೆ ಅರ್ಚನೆ ಮಾಡಿದ ತುಳಸಿಗಳನ್ನು ತೆಗೆದಿಟ್ಟುಕೊಂಡು ಆ

ನಿರ್ಮಾಲ್ಯತುಳಸಿಯನ್ನು ಪ್ರಾಣ-ಶಂಕರ-ನವಗ್ರಹ-ಗಣಪತಿ, ಗುರುಗಳು ಮುಂತಾದವರಿಗೆ ಸಮರ್ಪಿಸಬೇಕು.

ದೇವತಾ-ಗುರುಗಳಿಗೆ ನಿರ್ಮಾಲ್ಯ ತುಳಸಿಯನ್ನು ಸಮರ್ಪಿಸದೇ ಇರಬಾರದು. ಸಮರ್ಪಿಸಲೇ ಬೇಕು.

ಉಳಿದ ದೇವತೆಗಳ ಪೂಜೆ ಮಾಡಬೇಕಾದರೆ ನಿರ್ಮಾಲ್ಯ ಪುಷ್ಪ, ಮತ್ತು ನಿರ್ಮಾಲ್ಯವಲ್ಲದ ಪುಷ್ಪ ಎರಡರ ಆವಶ್ಯಕತೆಯೂ ಇರುತ್ತದೆ[1]. ಆದರೆ ದೇವತೆಗಳ ಪೂಜೆಯಲ್ಲಿ ನಿರ್ಮಾಲ್ಯವಲ್ಲದ ತುಳಸಿಯ ಆವಶ್ಯಕತೆ ಇರುವದಿಲ್ಲ.

**ದೇವರಿಗೆ ಸಮರ್ಪಿಸಿದ ತುಳಸಿಯಿಂದ ದೇವತೆಗಳನ್ನು ಪೂಜಿಸಿದಲ್ಲಿ ಅವರು ಪರಮ ಪ್ರೀತರಾಗುತ್ತಾರೆ. ಹೀಗಾಗಿ ಗಣಪತಿಗೂ ನಿರ್ಮಾಲ್ಯತುಳಸಿಯನ್ನು ಸಮರ್ಪಿಸಲೇಬೇಕು.**

— ವಿಷ್ಣುದಾಸ ನಾಗೇಂದ್ರಾಚಾರ್ಯ

---

[1] ಗಣಪತಿಪೂಜಾವಿಧಾನದ ಉಪನ್ಯಾಸಗಳನ್ನು ಕೇಳಿ. ವಿವರಿಸಿದ್ದೇನೆ.